### ಹತೋಟಿ ಕ್ರಮಗಳು :

- ಮರದ ಗರಿಗಳನ್ನು ತೆಗೆಯುವಾಗ ಕಾಂಡದಿಂದ 1 ಮೀ. ಉದ್ದ ಬಿಟ್ಟು ಕತ್ತರಿಸುವುದು ಹಾಗೂ ಗಿಡದ ಮೃದು ಅಂಗಾಂಶಗಳಿಗೆ ಗಾಯಗಳಾಗದಂತೆ ನೋಡಿಕೊಳ್ಳಬೇಕು.
- ಗಿಡ್ಡ ತಳಿಗಳು ಕೆಂಪು ಮೂತಿ ದುಂಬಿಯ ಬಾಧೆಗೆ ಬೇಗ ತುತ್ತಾಗುವುದರಿಂದ ಸರಿಯಾದ ಕಾಳಜಿ ವಹಿಸುವುದು ಅಗತ್ಯ.
- ಕೊಳೆತ ವಾಸನೆಯು ಈ ಕೀಟವನ್ನು ಆಕರ್ಷಿಸಿ ಮೊಟ್ಟೆಯಿಡುವಲ್ಲಿ ಸಹಕಾರಿಯಾಗಿರುವುದರಿಂದ ತೋಟದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ಮರಗಳಿಗೆ ಯಾವುದೇ ರೀತಿಯ ಗಾಯಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು.
- ಬಾಧೆಗೊಳಗಾದ ಮರಗಳನ್ನು ಕತ್ತರಿಸಿ ಸುಟ್ಟು ಹಾಕುವುದರಿಂದ ಈ ಕೀಟಬಾಧೆಯ ಹರಡುವಿಕೆಯನ್ನು ನಿಯಂತ್ರಿಸಬಹುದು.
- ಮರದಲ್ಲಿ ರಂಧ್ರಗಳು/ ಗಾಯಗಳು ಇದ್ದರೆ, ಹವಾಗುಣಕ್ಕನುಸಾರವಾಗಿ ಟಾರ್ ಅಥವಾ ಕ್ರಿಮಿನಾಶಕಗಳಿಂದ ಮತ್ತು ಮಣ್ಣು ಮಿಶ್ರಣದಿಂದ ಮುಚ್ಚುವುದರಿಂದ ಈ ಕೀಟ ಮೊಟ್ಟೆಯಿಡುವುದನ್ನು ತಡೆಗಟ್ಟಬಹುದು.
- 5 ಮಿ. ಲೀ. ಸ್ಪಿನೋಸೆಡ್ 2.5 ಎಸ್.ಸಿ. (ಶೇ. 0.13) ಅಥವಾ 1 ಮಿ. ಲೀ. ಇಮಿಡಾಕ್ಲೋಪ್ರಿಡ್ 18.5 ಎಸ್.ಎಲ್. ಅಥವಾ 2.5 ಮಿ. ಲೀ. ಇಂಡೊಕ್ಸಾಕಾರ್ಬ 14.5 ಇ.ಸಿ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಕಾಂಡಕ್ಕೆ ಸಿಂಪರಣೆ ಮಾಡುವುದರಿಂದ ಈ ಕೀಟವನ್ನು ಹತೋಟಿಯಲ್ಲಿಡಬಹುದು.
- ಪ್ರತಿ ಹೆಕ್ಟೇರಿಗೆ ಒಂದರಂತೆ ಫೆರುಜಿನಾಲ್ ಇರುವ ಫೆರಮೋನ್/ ಮೋಹಕ ಬಲೆಗಳನ್ನು ಅಳವಡಿಸುವುದರಿಂದ ಈ ಕೀಟದ ಪ್ರೌಢ ಜೀರುಂಡೆಗಳನ್ನು ಸಂಗ್ರಹಿಸಿ ನಾಶಪಡಿಸಬೇಕು. ಕಡಿಮೆ ವಯಸ್ಸಿನ ತೆಂಗಿನ ಮರವಿರುವ ತೆಂಗಿನ ತೋಟದಲ್ಲಿ ಹಾಗೂ ಎತ್ತರದ ಅಂತರ ಬೆಳೆಯಿರುವ (ಬಾಳೆ) ತೋಟದಲ್ಲಿ ಇದನ್ನು ಉಪಯೋಗಿಸಬಾರದು.


**ಪ್ರಕಟಣೆ:**

**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**
**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ,**
**ಬೆಂಗಳೂರು**



*Technical Folder Series No. 06/2020*



**ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**


**ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ**
**ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು**

# ಕೆಂಪು ದುಂಬಿ (ರಿಂಕೋಫೋರಸ್ ಫೆರ್ರುಜಿನಿಯಸ್) ಕೀಟದ ಸಮಗ್ರ ನಿರ್ವಹಣೆ




ತಾಂತ್ರಿಕ ಮಾಹಿತಿ
ಡಾ. ಕೇದಾರನಾಥ
ಡಾ. ರಮೇಶ ಟಿ. ಜೆ.
ಶ್ರೀಮತಿ ಸಂಘಮಿತ್ರೆ ವಿ. ಕೆ.
ಡಾ. ರಶ್ಮಿ ಆರ್.
ಡಾ. ಚೇತನ್ ಎನ್.
ಡಾ. ನವೀನ್‌ಕುಮಾರ್ ಬಿ. ಟಿ.
ಡಾ. ಮಲ್ಲಿಕಾರ್ಜುನ ಎಲ್.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872




**ಫೆಬ್ರವರಿ, 2020**

ಕೆಂಪು ದುಂಬಿಯು ವಿವಿಧ ತೋಟಗಾರಿಕೆ ಬೆಳೆಗಳಾದ ತೆಂಗು ಅಡಿಕೆ ಮತ್ತು ತಾಳೆ ಬೆಳೆಗಳನ್ನು ಬಾಧಿಸುವ ಪ್ರಮುಖ ಕೀಟವಾಗಿದೆ. ಏಷ್ಯಾ, ಆಸ್ಟ್ರೇಲಿಯಾ ಫಿಲಿಪೈನ್ಸ್ ಮತ್ತು ಥೈಲ್ಯಾಂಡ್‌ನಲ್ಲಿ ಸುಮಾರು 1962ನೇ ಇಸವಿಯ ಹಿಂದೆಯೆ ಈ ಕೀಟದ ಬಗ್ಗೆ ವರದಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಈ ಕೀಟದ ಬಾಧೆಯು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬಂದಿದ್ದು ತೆಂಗು ಮತ್ತು ಅಡಿಕೆಯ ಇಳುವರಿಯು ಕಡಿಮೆಯಾಗಿರುವುದಲ್ಲದೆ, ಮರಿ ಹುಳುಗಳು ಕೆಂಪುದುಂಬಿಯ ಅತ್ಯಂತ ವಿನಾಶಕಾರಿ ಹಂತವಾಗಿದ್ದು, ಅವು ಕಾಂಡದ ಕೆಳಗಿನ ಭಾಗದಲ್ಲಿ ಆಳವಾಗಿ ಬಾಧಿಸುವುದರಿಂದ ಆಂತರಿಕ ಅಂಗಾಂಶಗಳಿಗೆ ಸಾಕಷ್ಟು ಹಾನಿಯಾಗುತ್ತದೆ.

## ಜೀವನ ಚಕ್ರ

ಹೆಣ್ಣು ದುಂಬಿ ಕಾಂಡದ ಮೃದು ಭಾಗದಲ್ಲಿ ಸಣ್ಣದಾದ ರಂಧ್ರ ಕೊರೆದು ಮೊಟ್ಟೆಯಿಡುವುದು. ನಂತರ 2–3 ದಿನಗಳು ಕಳೆದು ಮೊಟ್ಟೆಯಿಂದ ಹೊರಬಂದ ಬಿಳಿಬಣ್ಣದ ಮರಿಹುಳುಗಳು ಕಾಂಡದ ಮೃದು ಅಂಗಾಂಶದೊಳಗೆ ಹೊಕ್ಕು ತಿನ್ನಲಾರಂಭಿಸುತ್ತವೆ. ನಾರಿನಿಂದ ಮಾಡಲ್ಪಟ್ಟ ಕೋಶದೊಳಗೆ ಹುಳುಗಳು ಕೋಶಾವಸ್ಥೆ ಕಳೆಯುತ್ತವೆ. ಮೊಟ್ಟೆಯಿಂದ ಕೀಟದವರೆಗೆ ಜೀವನ ಚಕ್ರ 4 ತಿಂಗಳಲ್ಲಿ ಪೂರೈಸುತ್ತವೆ.




## ಕೀಟ ಬಾಧೆಯ ಲಕ್ಷಣಗಳು :

- ಈ ಕೀಟದ ದಾಳಿಗೆ 20 ವರ್ಷ ಒಳಗಿನ ಗಿಡಗಳು ತುತ್ತಾಗುವುದರಿಂದ ತೆಂಗು ಹಾಗೂ ಅಡಿಕೆ ಬೆಳೆಗೆ ಒಂದು ಮಾರಕ ಕೀಟವಾಗಿದೆ.
- ಸಾಧಾರಣವಾಗಿ ಗಿಡ್ಡ ತಳಿಗಳು ಈ ಕೀಟದ ಬಾಧೆಗೆ ಸುಲಭವಾಗಿ ತುತ್ತಾಗುತ್ತವೆ.
- ಈ ಕೀಟವು ತೆಂಗಿನ ಮರದ ಮೃದುವಾದ ಅಂಗಾಂಶ, ಸುಳಿಭಾಗ ಹಾಗೂ ಹತ್ತಿರದ ಕಾಂಡಕ್ಕೆ ದಾಳಿಮಾಡುತ್ತದೆ. ಇದರಿಂದಾಗಿ ಕಾಂಡದಲ್ಲಿ ರಂಧ್ರಗಳು ಕಾಣಿಸಿಕೊಂಡು ಅವುಗಳಿಂದ ಕಂದು ಬಣ್ಣದ ನಾರಿನಂತಹ ಪದಾರ್ಥ ಹೊರಸೂಸುತ್ತದೆ.
- ಮರಿ ಹುಳುಗಳು ಸುಳಿ ಭಾಗ ತಿನ್ನುವುದರಿಂದ ಮರ ಸಾಯುತ್ತದೆ ಹಾಗೂ ಸುಳಿ ಭಾಗದ ಎಲೆಗಳು ಒಣಗಿ, ಸುಳಿಯು ಸೊರಗಿ ಅದರ ಬುಡ ಭಾಗ ಉದ್ದವಾಗಿ ಸೀಳಿಕೊಳ್ಳುವುದರ ಜೊತೆಗೆ ಶಿರ ಭಾಗ ಉರುಳಿ ಬೀಳುತ್ತದೆ.
- ಕೀಟದ ಇರುವಿಕೆಯನ್ನು ಕಾಂಡದ ಒಳಗಿನಿಂದ ಬರುವ ಶಬ್ಧವನ್ನು ಆಲಿಸುವುದರ ಮೂಲಕ ಕಂಡು ಹಿಡಿಯಬಹುದು.
- ಸುಳಿ ಕೊಳೆಯುವ ರೋಗ, ಎಲೆ ಕೊಳೆಯುವ ರೋಗ ಮತ್ತು ಕಪ್ಪು ರೈನೋಸೆರೆಸ್ ದುಂಬಿ ಬಾಧಿತ ಮರಗಳು ಈ ಕೀಟದ ಸಂತಾನೋತ್ಪತ್ತಿಗೆ/ ಬೆಳವಣಿಗೆಗೆ ಸಹಾಯಕಾರಿಯಾಗುತ್ತವೆ.


ಕೆಂಪು ಮೂತಿ ದುಂಬಿ


ಕೀಟದ ಬಾಧೆಗೆ ತುತ್ತಾದ ತೆಂಗಿನ ಸುಳಿ